**ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ವೈರ್‌ಲೆಸ್)-2017 ಹುದ್ದೆಗಳ ಆಯ್ಕೆ ಸಲುವಾಗಿ ನಿಯಮಾನುಸಾರ ಮೌಖಿಕ ಪರೀಕ್ಷೆಗೆ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಕುರಿತು ನಡವಳಿ.**

ನೇಮಕಾತಿ ಮತ್ತು ತರಬೇತಿ ಕಛೇರಿಯಲ್ಲಿ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ವೈರ್‌ಲೆಸ್) (ಪುರುಷ & ಮಹಿಳಾ) ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಅಧಿಸೂಚನೆ ಸಂಖ್ಯೆ: 65/ನೇಮಕಾತಿ-2/2017-18, ದಿ:20.07.2107ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ಸದರಿ ನೇಮಕಾತಿ ಪ್ರಕ್ರಿಯೆಯ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳನ್ನು ಪೂರ್ಣಗೊಳಿಸಿದ ನಂತರ ಅರ್ಹ ಅಭ್ಯರ್ಥಿಗಳಿಗೆ ದಿ: 24.09.2017 ರಂದು ಲಿಖಿತ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ನಿಯಮಾನುಸಾರ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳು ಹಾಗೂ ಮೆರಿಟ್ ಮತ್ತು ಮೀಸಲಾತಿಯನುಸಾರ 1:2 ಅನುಪಾತದಂತೆ ಅಭ್ಯರ್ಥಿಗಳನ್ನು ಮೌಖಿಕ ಪರೀಕ್ಷೆಗೆ ಪರಿಗಣಿಸಿ, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ದಿ: 11.12.2017 ರಂದು ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.in ನಲ್ಲಿ ಪ್ರಕಟಿಸಲಾಗಿರುತ್ತದೆ.

ಶ್ರೀ ಭೀಮಪ್ಪ ಕೆ., (ಅರ್ಜಿ ಸಂಖ್ಯೆ:2130978, ನೋಂದಣಿ ಸಂಖ್ಯೆ:5000402) ರವರು ದಿನಾಂಕ: 12.12.2017 ರಂದು ಈ ಕಛೇರಿಗೆ ಹಾಜರಾಗಿ ಮನವಿ ಪತ್ರವನ್ನು ಸಲ್ಲಿಸಿ, ದಿ: 11.12.2017 ರಂದು ಪ್ರಕಟಿಸಲಾಗಿರುವ ಮೌಖಿಕ ಪರೀಕ್ಷೆಯ ಅರ್ಹ ಅಭ್ಯರ್ಥಿಗಳ ಪಟ್ಟಿಯಲ್ಲಿ ತನ್ನ ಹೆಸರಿದ್ದು, ಸದರಿಯವರು ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಕಣ್‌ತಪ್ಪಿನಿಂದ ಪುರುಷ ಅಭ್ಯರ್ಥಿಯ ಬದಲಾಗಿ ಮಹಿಳಾ ಅಭ್ಯರ್ಥಿಯೆಂದು ಭರ್ತಿ ಮಾಡಿರುವುದಾಗಿ ತಿಳಿಸುತ್ತಾ, ತಾನು ಪುರುಷ ಅಭ್ಯರ್ಥಿಯ ಮೀಸಲಾತಿಯಡಿ ಮೌಖಿಕ ಪರೀಕ್ಷೆಗೆ ಅರ್ಹನಿದ್ದಲ್ಲಿ ತನ್ನನ್ನು ಪರಿಗಣಿಸಬೇಕೆಂದು ಕೋರಿರುತ್ತಾರೆ. ಅದರಂತೆ ಶ್ರೀ ಭೀಮಪ್ಪ ಕೆ., ರವರ ಮೌಖಿಕ ಪರೀಕ್ಷೆಯ ಅರ್ಹತೆಯನ್ನು ಪರಿಶೀಲಿಸಲಾಗಿ, ಸದರಿಯವರು ಮೆರಿಟ್ ಅನುಸಾರ ಪುರುಷ ಮೀಸಲಾತಿಯಡಿ ಮೌಖಿಕ ಪರೀಕ್ಷೆಗೆ ಅರ್ಹರಿರುವುದಿಲ್ಲ. ಆದ್ದರಿಂದ ದಿನಾಂಕ: 11.12.2017 ರಂದು ಪ್ರಕಟಿಸಲಾಗಿದ್ದ, ಮೌಖಿಕ ಪರೀಕ್ಷೆಯ ಅರ್ಹತಾ ಪಟ್ಟಿಯಿಂದ ಶ್ರೀ ಭೀಮಪ್ಪ ಕೆ., ರವರ ಹೆಸರನ್ನು ತೆಗೆದು ಹಾಕಿ ಸದರಿಯವರ ಬದಲಾಗಿ ಮಹಿಳಾ ಮೀಸಲಾತಿಯಡಿ ಅರ್ಹರಿರುವ ಕು॥ ನೇತ್ರ ಬಿ ಹಂಚಿನಮಣಿ (ಅರ್ಜಿ ಸಂಖ್ಯೆ:2132471, ನೋಂದಣಿ ಸಂಖ್ಯೆ:5000380) ರವರನ್ನು ಮೌಖಿಕ ಪರೀಕ್ಷೆಗೆ ಪರಿಗಣಿಸಲಾಗಿರುತ್ತದೆ.

**ದಿನಾಂಕ:12.12.2017.**

ಶ್ರೀ ರಾಘವೇಂದ್ರ ಔರಾದ್‌ಕರ್, ಐಪಿಎಸ್,
ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ & ತರಬೇತಿ ಹಾಗೂ ಅಧ್ಯಕ್ಷರು,
ಪಿಎಸ್‌ಐ (ವೈರ್‌ಲೆಸ್) ನೇಮಕಾತಿ ಸಮಿತಿ.
ಕಾರ್ಲಟನ್ ಭವನ, ಅರಮನೆ ರಸ್ತೆ, ಬೆಂಗಳೂರು.